# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್.ಎಸ್ ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

************

**ಪ್ರಶ್ನೆ:**

ಬೆಂಗಳೂರು ನಗರದ ಸ್ಮಶಾನಗಳು ಸೂಕ್ತವಾದ ನಿರ್ವಹಣೆಯಿಲ್ಲದೆ ದಯನೀಯ ಸ್ಥಿತಿಯಲ್ಲಿವೆ. ವಿದ್ಯುತ್ ಚಿತಾಗಾರದ ಅವ್ಯವಸ್ಥೆಯಂತು ಹೇಳತೀರದು. ಪ್ರಶಾಂತವಾದ, ಸ್ವಚ್ಛ ವಾತಾವರಣ ಇರಬೇಕಾದ ಸ್ಥಳವು ಗಲೀಜು ಮತ್ತು ಅವ್ಯವಸ್ಥೆಯ ಆಗರವಾಗಿದೆ. ಕಸ ವಿಲೇವಾರಿಗೆ ಸೂಕ್ತ ವ್ಯವಸ್ಥೆ ಇಲ್ಲವಾಗಿದೆ. ಕೈ-ಕಾಲು ತೊಳೆಯುವ ಜಾಗವು ಪಾಚಿ ಕಟ್ಟಿ ಉಪಯೋಗಿಸುವವರು ಅತ್ಯಂತ ಜಾಗರೂಕತೆಯಿಂದ ಬಳಸಬೇಕಾಗುತ್ತದೆ. ಶೌಚಾಲಯಗಳ ಪರಿಸ್ಥಿತಿಯು ಅತ್ಯಂತ ಗಂಭೀರ ಸ್ಥಿತಿಯಲ್ಲಿದೆ. ಅದನ್ನು ಬಳಸಿದರೆ ಕಾಯಿಲೆ ಬರುವುದು ಖಚಿತ.

ಹೂಳುವ ಪದ್ಧತಿಯಲ್ಲಿ ಶವಸಂಸ್ಕಾರ ಮಾಡುವ ಸ್ಥಳಗಳ ವ್ಯವಸ್ಥೆಯೂ ಅತ್ಯಂತ ಗಂಭೀರವಾಗಿದೆ. ಸ್ವಚ್ಛತೆಯಿಲ್ಲದೆ, ಕಸದ ಆಗರವಾಗಿದೆ.

ಅಪರ ಕರ್ಮ ಮಾಡುವ ಸ್ಥಳವು ಕಸದ ರಾಶಿಯಿಂದ ತುಂಬಿರುತ್ತದೆ. ಸಿಬ್ಬಂದಿಗಳಿಂದ ಹಣದ ಸುಲಿಗೆ ನಿರಂತರವಾಗಿ ನಡೆಯುತ್ತಿದೆ. ಇಲ್ಲಿ ಸಿಬ್ಬಂದಿಗಳು ನೇಮಕವಾದವರೋ, ಅಥವಾ ಗುತ್ತಿಗೆ ಆಧಾರದ ಮೇಲೆ ಇರುವವರೋ ತಿಳಿಯದಾಗಿದೆ. ಸಿಬ್ಬಂದಿಗಳಿಗೆ ಸಮವಸ್ತ್ರ ನೀಡಿಲ್ಲ.

ತಮ್ಮ ಕುಟುಂಬದ ಸದಸ್ಯರನ್ನು ಕಳೆದುಕೊಂಡಿರುವವರಿಗೆ ಇಲ್ಲಿನ ಪರಿಸರ ಮತ್ತಷ್ಟು ಜಿಗುಪ್ಸೆ ಮೂಡಿಸುತ್ತದೆ.

ಸರ್ಕಾರದ ಸ್ಮಶಾನಗಳಲ್ಲಿ ಶಾಂತ ವಾತಾವರಣ, ಸ್ವಚ್ಛತೆಗೆ ಆದ್ಯತೆ, ಮೂಲಭೂತಸೌಕರ್ಯ, ಸಿಬ್ಬಂದಿಗಳ ಸೂಕ್ತ ಮೇಲ್ವಿಚಾರಣೆ, ವಾಹನ ನಿಲುಗಡೆ ವ್ಯವಸ್ಥೆ, ನಿಗದಿತ ಮೊತ್ತ, ಮರಣ ನಮೂದಿಸುವ ವ್ಯವಸ್ಥೆಗಾಗಿ ವಿಶೇಷ ಗಮನ ಹರಿಸಿ ಚಿತಾಗಾರಗಳ ಸ್ಥಿತಿಯನ್ನು ಬದಲಾಯಿಸಿ ಎಂಬ ಬಗ್ಗೆ.

**ಉತ್ತರ:**

ವಿದ್ಯುತ್ ಚಿತಾಗಾರದ ನಿರ್ವಹಣೆಯನ್ನು ನಡೆಸಲಾಗುತ್ತಿದ್ದು, ಕಸ ವಿಲೇವಾರಿಯನ್ನು ಘನ ತ್ಯಾಜ್ಯ ನಿರ್ವಹಣಾ ವಿಭಾಗದಿಂದ ಸೂಕ್ತ ರೀತಿಯಲ್ಲಿ ಕೈಗೊಳ್ಳಲಾಗುತ್ತಿರುತ್ತದೆ. ಕೈಕಾಲು ತೊಳೆಯುವ ಜಾಗಗಳನ್ನು ಹಾಗೂ ಶೌಚಾಲಯಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು.

ಸ್ಮಶಾನಗಳಲ್ಲಿ ಹೂಳುವ ಪದ್ಧತಿಯ ಶವ ಸಂಸ್ಕಾರ ಮಾಡುವ ಸ್ಥಳಗಳ ನಿರ್ವಹಣೆಯನ್ನು ಮತ್ತು ಕಸ ವಿಲೇವಾರಿಯನ್ನು ಸೂಕ್ತ ರೀತಿಯಲ್ಲಿ ಕೈಗೊಳ್ಳಲಾಗುತ್ತಿರುತ್ತದೆ. ಸ್ವಚ್ಛತೆಯನ್ನು ಕಾಪಾಡಲು ಹೆಚ್ಚಿನ ಪ್ರಾಮುಖ್ಯತೆಯನ್ನು ವಹಿಸಿ ಕ್ರಮ ಕೈಗೊಳ್ಳಲಾಗುವುದು.

ಹಣ ಸುಲಿಗೆ ಮಾಡಿರುವ ಬಗ್ಗೆ ಯಾವುದೇ ವರದಿಯಾಗಿರುವುದಿಲ್ಲ. ಸ್ಮಶಾನಗಳಲ್ಲಿ ಪ್ರತಿ ಶವ ಸಂಸ್ಕಾರಕ್ಕೆ ರೂ. 250/- ಗಳನ್ನು ರಶೀದಿ ಮುಖೇನ ಸ್ವೀಕರಿಸಲಾಗುತ್ತದೆ. ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿದ್ದು, ಸದರಿಯವರಿಗೆ ಸಮವಸ್ತ್ರ ನೀಡುವ ಬಗ್ಗೆ ಕ್ರಮವಹಿಸಲಾಗುತ್ತಿರುತ್ತದೆ.

ಸ್ಮಶಾನಗಳ ವ್ಯಾಪ್ತಿಯಲ್ಲಿ ಸಾಕಷ್ಟು ಸ್ಥಳಾವಕಾಶವಿದ್ದು, ಶವ ಸಂಸ್ಕಾರಕ್ಕೆ ಬರುವ ಸಾರ್ವಜನಿಕರ ವಾಹನ ನಿಲುಗಡೆಗೆ ಯಾವುದೇ ಸಮಸ್ಯೆ ಆಗುತ್ತಿರುವುದಿಲ್ಲ. ಸಿಬ್ಬಂದಿಗಳ ಸೂಕ್ತ ಮೇಲ್ವಿಚಾರಣೆಯನ್ನು ಆರೋಗ್ಯ ವೈದ್ಯಾಧಿಕಾರಿಗಳು ಹಾಗೂ ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ರವರುಗಳು ಮಾಡುತ್ತಾರೆ.

**ನಅಇ 72 ಬಿಬಿಎಲ್ 2026**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ